ಇಂದು ದಿಃ 28.03.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಸರ್ಕಾರಿ ವಕೀಲರಿಂದಃ

ದಾವಾ ಆಸ್ತಿಯ ಕಂದಾಯ ದಾಖಲೆಗಳು ನನ್ನ ತಂದೆಯಾದ ಕೋಟಪ್ಪನವರ ಹೆಸರಿನಲ್ಲಿತ್ತು. ಕಲಂ 9 ಮತ್ತು 12 ರಲ್ಲಿ ನನ್ನ ತಂದೆಯ ಹೆಸರು ಇರುವಾಗ ದಾವಾ ಸಲ್ಲಿಸುವ ಪ್ರಮೇಯ ಬರುವುದಿಲ್ಲ ಎಂದರೆ ಸರಿಯಲ್ಲ. ದಾವೆ ಸಲ್ಲಿಸುವಾಗ ನಿ ಪಿ 13 ರ ಕಲಂ 9 ಮತ್ತು 12 ರಲ್ಲಿ ನನ್ನ ಹೆಸರಿಗಾಗಲೀ ನನ್ನ ತಂದೆ ಹೆಸರಿಗಾಗಲೀ ಇಲ್ಲ ಎಂದರೆ ದಾಖಲೆ ನೋಡಿ ಸರಿ ಎನ್ನುತ್ತಾರೆ. ರಾಮಚಂದ್ರರಾವ್ ರವರ ಮಕ್ಕಳು ಈ ಪ್ರಕರಣದ 1 ಮತ್ತು 2 ನೇ ಪ್ರತಿವಾದಿಗಳು ಎಂದರೆ ಸರಿ. ಪ್ರತಿವಾದಿಗಳ ತಂದೆ ಹೆಸರು ಕಂದಾಯ ದಾಖಲೆಗಳಲ್ಲಿ ಇರುವ ವಿಚಾರ ನನಗೆ 2021 ಕ್ಕೆ ನನ್ನ ಗಮನಕ್ಕೆ ಬಂತು. ನನ್ನ ಗಮನಕ್ಕೆ ಬಂದ ನಂತರ ನಾನು ತಹಶೀಲ್ದಾರರಿಗೆ ಅರ್ಜಿ ಕೊಟ್ಟಿದ್ದೆ. ಅರ್ಜಿ ಮೇಲೆ ತೀರ್ಮಾನವಾಗಿ ಕಲಂ 9 ಮತ್ತು 12 ರಲ್ಲಿ ನಮ್ಮ ಹೆಸರು ಬರುವುದಿಲ್ಲ ಎಂದು ಕಳುಹಿಸಿದ್ದರು. ಆ ಆದೇಶದ ವಿರುದ್ಧ ಉಪವಿಭಾಗಾಧಿಕಾರಿಗೆ ಮೇಲ್ಮನವಿ ಸಲ್ಲಿಸಿಲ್ಲ. ಮೇಲ್ಮನವಿ ಸಲ್ಲಿಸಲು ತೊಂದರೆ ಇರಲಿಲ್ಲ ಆದರೆ ನ್ಯಾಯಾಲಯಕ್ಕೆ ದಾವಾ ದಾಖಲಿಸಿದ್ದೆ. ನಿಪಿ 13 ರಲ್ಲಿ ಇರುವ ಕಲಂ 9 ಮತ್ತು 12 ರ ನಮೂದುಗಳು ಕಾನೂನಾತ್ಮಕವಾಗಿ ನಮೂದಾದ ದಾಖಲೆಗಳು ಎಂದರೆ ಸರಿ.

ನನ್ನ ದಾವೆಯಲ್ಲಿ ಕೇಳಿದ 2 ನೇ ಪರಿಹಾರ ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎಂ ಜೆ ಎಸ್ ವಕೀಲರಿಂದಃ**

ನಾನು ನೇತ್ರಪರೀಕ್ಷಕನಾಗಿ ಕೆಲಸ ಮಾಡುತ್ತಿದ್ದೆ. ನಾನು 1995 ರಲ್ಲಿ ಸೇವೆಗೆ ಸೇರಿದ್ದು 2019 ರಲ್ಲಿ ನಿವೃತ್ತನಾಗಿದ್ದೆ. ನಾನು ಸರ್ಕಾರಿ ಸೇವೆಯಲ್ಲಿದ್ದಾಗ ಬೈಲುಕುಪ್ಪೆ ಮತ್ತು ಚಿಕ್ಕೇರಿಯಲ್ಲಿ ಕೆಲಸ ಮಾಡಿದ್ದೆ. ಜಮೀನು ಇರುವ ಗ್ರಾಮಗಳಲ್ಲಿ ನಾವು ವಾಸ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಅಕ್ಕ ಭಾವ ಮತ್ತು ತಾಯಿ ವಾಸವಿದ್ದು ಉಳಿದವರು ದೂರ ಊರಿನಲ್ಲಿ ವಾಸವಿದ್ದಾರೆ. ನನ್ನ ಅಕ್ಕನಾದ 3 ನೇ ವಾದಿಯ ಗಂಡ ಇದ್ದಾರೆ. 2006 ರ ನಂತರ ನಾನು ಆದಾಯ ತೆರಿಗೆ ಪಾವತಿದಾರನಾಗಿದ್ದೆ. ನನ್ನ ಆಸ್ತಿ ಜವಾಬ್ದಾರಿ ತಃಖ್ತೆಯಲ್ಲಿ ಈ ದಾವಾ ಆಸ್ತಿಯನ್ನು ತೋರಿಸಿಲ್ಲ.

ಈ ಜಮೀನಿನಿಂದ ಆದಾಯ ಬಂದಿದೆ ಎಂದು ನಾನು ನನ್ನ ಆದಾಯ ತೆರಿಗೆ ವರದಿಯಲ್ಲಿ ತೋರಿಸಿಲ್ಲ. ನನ್ನ ಪ್ರಕಾರವಾಗಿ ದಾವಾ ಆಸ್ತಿಯಿಂದ 35000-40000 ಆದಾಯ ಬರುತ್ತದೆ. ಆ ಆಸ್ತಿಯಿಂದ ಬರುತ್ತಿದ್ದ ಆದಾಯವನ್ನು ನನ್ನ ಆದಾಯ ತೆರಿಗೆಯಲ್ಲಿ ತೋರಿಸಿಲ್ಲ. ದಾವಾ ಆಸ್ತಿಯಲ್ಲಿ ನಾನು ಸ್ವಾಧೀನವಿರದ ಕಾರಣ ನಾನು ಆದಾಯ ತೆರಿಗೆ ವರದಿಯಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ.

ಆರ್ ಟಿ ಸಿ ಯಲ್ಲಿ ಕಂಡುಬರುವ ಕೋಟಪ್ಪ ನನ್ನ ತಂದೆ ಎಂದು ತೋರಿಸಲು ನಾನು ನನ್ನ ಪ್ರಮಾಣಪತ್ರ ಮತ್ತು ವಂಶವೃಕ್ಷ ಹಾಜರು ಮಾಡಿದ್ದೇನೆ. ಸದರಿ ದಾಖಲೆಗಳನ್ನು ಬಿಟ್ಟು ಸರ್ಕಾರಿ ಕಚೇರಿಗಳಿಂದ ಪಡೆದ ಬೇರೆ ದಾಖಲೆ ಹಾಜರು ಮಾಡಿಲ್ಲ. ನನ್ನ ತಂದೆ 1999 ರಲ್ಲಿ ಮೃತಪಟ್ಟರು. ನನ್ನ ತಂದೆ ಮೃತರಾದಾಗ ನಾನು ಪಿರಿಯಾಪಟ್ಟಣದ ಬೈಲುಕುಪ್ಪದಲ್ಲಿ ಇದ್ದೆ.

ನನ್ನ ತಂದೆ ಕೋಟಪ್ಪನವರಿಗೆ ದಾವಾ ಆಸ್ತಿ ಹೊರತುಪಡಿಸಿ ಸರ್ವೆ ನಂಬರ್ 98 ರಲ್ಲಿ 4 ಎಕರೆ ಮತ್ತು 159 ರಲ್ಲಿ 12 ಗುಂಟೆ ಆಸ್ತಿ ಇತ್ತು. ನಿ ಪಿ 31 ರಲ್ಲಿ 4 ಸರ್ವೆ ನಂಬರ್ ಗಳನ್ನು ತೋರಿಸುತ್ತಿದೆ ಎಂದರೆ ಸರಿ. ನಿ ಪಿ 31 ರಲ್ಲಿ ಜಯಮ್ಮ ಎಂದು ಇದೆ ಎಂದರೆ ಸರಿ. 2016 ರ ನಂತರದ ಕಂದಾಯ ಪಾವತಿ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ನಿಪಿ 31 ಅನ್ನು ಬಿಟ್ಟು ಬೇರೆ ರಶೀದಿಗಳನ್ನು ಕೊಟ್ಟಿಲ್ಲ ಎಂದರೆಸ ರಿಯಲ್ಲ. ನಿ ಪಿ 31 ರಲ್ಲಿ ತೋರಿಸಿದ ಜಮೀನಿನ ಪೈಕಿ ಹಿಡುವಳಿ ಜಮೀನು ಎಷ್ಟು ಎಂದರೆ ದಾವಾ ಜಮೀನು ಬಿಟ್ಟು ಉಳಿದಿರುವುದು ಹಿಡುವಳಿ ಜಮೀನು ಎಂದು ಸಾಕ್ಷಿ ನುಡಿಯುತ್ತಾರೆ.

ನನ್ನ ತಂದೆ ಭೂ ನ್ಯಾಯಮಂಡಳಿಗೆ ಅರ್ಜಿ ಕೊಟ್ಟಿದ್ದರು. ಅದು ಇಬ್ಬರು ಪಕ್ಷಗಾರರು ಇಲ್ಲದ ಕಾರಣ ವಜಾ ಆಗಿತ್ತು. ಆ ರೀತಿ 2000 ರಲ್ಲಿ ಅರ್ಜಿ ವಜಾ ಆಗಿತ್ತು. ನನ್ನ ಪ್ರಕಾರವಾಗಿ ಭೂ ನ್ಯಾಯಮಂಡಳಿಗೆ 1998 ರಲ್ಲಿ ಅರ್ಜಿ ಕೊಡಲಾಗಿತ್ತು. ಅದನ್ನು ಹುಡುಕಿ ತಂದು ಕೊಡಬಹುದು. ಆ ಅರ್ಜಿಯ ನಂಬರ್ ನೆನಪಿಲ್ಲ. ಆದೇಶದ ಪ್ರತಿಯನ್ನು ನಾನು ನೋಡಿದ್ದೇನೆ. ಅದೇಶವಾದ ದಿನಾಂಕ 20.03.2000 ಇರಬಹುದು. ನನ್ನ ತಂದೆ 1999 ರಲ್ಲಿ ಕಾಲವಾದ ನಂತರ 2022 ರವರೆಗೆ ಆರ್ ಟಿ ಸಿ ಯಲ್ಲಿ ನನ್ನ ಹೆಸರನ್ನು ಸೇರಿಸಲು ಏನು ಪ್ರಯತ್ನ ಮಾಡಿದ್ದೆ ಎಂದರೆ ಸಾಕ್ಷಿಯು ನಾನು ಅರ್ಜಿ ಕೊಡುತ್ತಾ ಬಂದಿದ್ದೆ. ಆ ರೀತಿ ಅರ್ಜಿ ಕೊಟ್ಟ ಬಗ್ಗೆ ನನ್ನ ಬಳಿ ದಾಖಲೆ ಇರುತ್ತದೆ ಅದನ್ನು ಹುಡುಕಿ ಕೊಡಬಹುದು.

ನಮ್ಮ ನಡುವೆ ವ್ಯಾಜ್ಯದ ಕಾರಣಗಳು ಭೂನ್ಯಾಯಮಂಡಳಿಯಲ್ಲಿ ಆದೇಶವಾದ ದಿನಾಂಕದಿಂದ ಆರಂಭವಾಗಿದೆ ಎಂದು ನಾನು ಹೇಳಿದ್ದೇನೆ ಎಂದರೆ ಸರಿ. ಈ ಮೊದಲು ನಾನು 20.03.2000 ರ ಇರಬಹುದು ಎಂದು ಹೇಳಿದ್ದು, ನನ್ನ ಪ್ರಕಾರವಾಗಿ ಯಾವ ದಿನಾಂಕದಿಂದ ಸ್ವಾಧೀನದಲ್ಲಿದ್ದೇನೆ ಎಂದು ಸ್ಪಷ್ಟ ಸಾಕ್ಷಿ ಇಲ್ಲ ಎಂದರೆ ಸರಿಯಲ್ಲ.

ದಾವಾ ಸರ್ವೆ ನಂಬರ್ 95/ಪಿ 6 ಆಗಿರುತ್ತದೆ. ಈಗ ಅದನ್ನು ಬದಲಾವಣೆ ಮಾಡಿದ್ದಾರೆ. ನನ್ನ ತಂದೆ ದಾವಾ ಸ್ವತ್ತನ್ನು 50 ವರ್ಷದಿಂದ ಅನುಭವಿಸುತ್ತಾ ಬಂದಿದ್ದಾರೆ ಮತ್ತು ಇಂತಹದ್ದೇ ಜಮೀನು ಎಂದು ಚಕ್ಕುಬಂದಿ ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಕಾರವಾಗಿ ದಾವಾ ಸ್ವತ್ತಿನಲ್ಲಿ ಈಗ ಬಾಳೆ, ಟೊಮೆಟೊ ಬೆಳೆಯುತ್ತಿದ್ದೇನೆ. ಬಾಳೆ ಮತ್ತು ಟೊಮೆಟೊ ಬೆಳೆಯಲು ನೀರಾವರಿ ಅವಶ್ಯಕತೆ ಇದ್ದು ಅದು ಸರ್ವೆ ನಂಬರ್ 43 ರಲ್ಲಿಪಂಪ್ ಸೆಟ್ ಇದ್ದು ಅಲ್ಲಿಂದ ನೀರಾವರಿ ಸೌಲಭ್ಯ ಪಡೆಯುತ್ತಿದ್ದೇನೆ. ದಾವಾ ಆಸ್ತಿಯು ಖುಷ್ಕಿ ಜಮೀನು ಎಂದರೆ ಅದು ಕಂದಾಯ ಇಲಾಖೆಯವರು ತಪ್ಪು ಬರೆದಿದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ.

ನಿ ಪಿ 2 ರಾಮಚಂದ್ರರಾವ್ ರವರ ಹೆಸರಿನಲ್ಲಿದ್ದು 4 ಎಕರೆ ಆಸ್ತಿ ಇದೆ. ಅದನ್ನು ಕೆ ಬಿ ಜವರಯ್ಯ ನವರು ಸದರಿ ಪೂರ್ತಿ 4 ಎಕರೆ ಜಮೀನಿನಲ್ಲಿ ಗುತ್ತಿಗೆ ಮಾಡುತ್ತಿದ್ದು ಅವರು ನನಗೆ ಸಂಬಂಧವಿಲ್ಲ. ನಿ ಪಿ 2 ರ ಪ್ರಕಾರ ರಾಮಚಂದ್ರರಾವ್ ರವರು ಸದರಿ ಜಮೀನಿನಲ್ಲಿದ್ದು ನಾನು ಹೇಳುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ನಿ ಪಿ 3 ರ ಪ್ರಕಾರ 1 ಎ 20 ಗುಂಟೆ ಜಮೀನು ಜವರಯ್ಯನಿಗೆ ಭೂ ನ್ಯಾಯಮಂಡಳಿಯಿಂದ ಬಂದಿದೆ. ನನಗೆ ಜವರಯ್ಯ ಪರಿಚಯ ಇದ್ದಾರೆ. ಜವರಯ್ಯ ಈಗ ಬದುಕಿಲ್ಲ ಅವರ ಮಕ್ಕಳಾದ ಗಂಗಾಧರ ಮತ್ತು ಕುಮಾರ ಇದ್ದಾರೆ. ಜವರಯ್ಯನಿಗೆ ಕೊಟ್ಟ 1 ಎ 20 ಗುಂಟೆ ಜಮೀನು ಉತ್ತರದ ಕಡೆ ಇದೆ. ನಾನು ದಾವೆಯಲ್ಲಿ ತೋರಿಸಿದಂತೆ ಉತ್ತರದ ಕಡೆಗೆ ಜವರಯ್ಯನ ಜಮೀನು ಎಂದು ನಮೂದು ಮಾಡಿಲ್ಲ ಎಂದರೆ ಅಲ್ಲಿ ಚಾನಲ್ ಇದ್ದು ಅದರ ನಂತರ ಕೆಂಪಸಿದ್ದಯ್ಯನ ಜಮೀನು ಇದದು ಅದರ ನಂತರ ಜವರಯ್ಯನ ಜಮೀನು ಬರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಒಂದಾನುವೇಳೆ ನಾನು ದಾವಾ ಜಮೀನಿನಲ್ಲಿ ಸ್ವಾಧೀನದಲ್ಲಿದ್ದರೆ ನಾನು ಕೊಟ್ಟ ದಾಖಲೆಗಳ ಪ್ರಕಾರ ನಮೂದು ಇರುತ್ತಿತ್ತು ನಾನು ವಾಸವಿಲ್ಲದ ಕಾರಣ ಇಲ್ಲ ಎಂದರೆ ಸರಿಯಲ್ಲ.

ದಾವಾ ಜಮೀನಿನ ಸರ್ವೆ 50 ವರ್ಷಗಳಿಂದ ಯಾವತ್ತು ಆಗಿಲ್ಲ. ಸರ್ವೆ ನಂಬರ್ 95 ರಲ್ಲಿ 68 ಎಕರೆ ಇದೆ ಎಂದರೆ ಸರಿ. ಪೂರ್ತಿ 68 ಎಕರೆ ಯ ಪೈಕಿ ಖಾಲಿ ಜಾಗ ಇಲ್ಲ. ದಾವಾ ಆಸ್ತಿಯ 2 ಎ 20 ಗುಂಟೆ ಅಕ್ಕಪಕ್ಕದಲ್ಲಿ ಯಾವೆಲ್ಲಾ ಬ್ಲಾಕ್ ಗಳಿವೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ 4 ಕಡೆ ಇರುವ ಪೈಕಿ ಉತ್ತರದ ಕಡೆ ಇರುವವರಿಗೆ ಪಿತ್ರಾರ್ಜಿತ ಆಸ್ತಿ, ಪಶ್ಚಿಮದ ಕಡೆ ಇರುವವರಿಗೆ ದರಖಾಸ್ತು ಮುಖಾಂತರ ಮಂಜೂರಾಗಿದೆ, ಪೂರ್ವದ ಕಡೆ ಇರುವವರಿಗೂ ಸ್ವಯಾರ್ಜಿತ ಆಸ್ತಿ ಮತ್ತು ದಕ್ಷಿಣದ ಕಡೆ ಇರುವವರಿಗ ದರಖಾಸ್ತು ಮೂಲಕ ಮಂಜೂರಾಗಿದೆ. ನಾನು ಈ ರೀತಿ ಸಾಮಾನ್ಯ ತಿಳುವಳಿಕೆಯಿಂದ ಹೇಳುತ್ತಿದ್ದೇನೆ. ನನ್ನ ಅಕ್ಕಪಕ್ಕದವರು ಯಾರೂ ಅಳತೆ ಮಾಡಿಸಿಲ್ಲ.

ಸರ್ವೆ ನಂಬರ್ 95 ಪಿ 6 ನ ಒಟ್ಟು 68 ಎಕರೆ ಜಮೀನಿನ ಪೂರ್ವದ ಕಡೆ ದಾವಾ ಜಮೀನು ಬರುತ್ತದೆ. ಅದರ ಬಗ್ಗೆ ಕಂದಾಯ ದಾಖಲೆಗಳನ್ನು ನಾನು ನೋಡಿಲ್ಲ. ದಾವಾ ಸಲ್ಲಿಸುವ ಪೂರ್ವದಲ್ಲಿ ನಕ್ಷೆ ಪಡೆವ ಪ್ರಯತ್ನ ಮಾಡಿಲ್ಲ. ನಾನು ದಾವೆಯಲ್ಲಿ ಸರ್ವೆ ನಂಬರ್ 95 ರಲ್ಲಿ 67 ಎ 8 ಗುಂಟೆ ಯಲ್ಲಿ ಕೇಳುತ್ತಿದ್ದೇನೆ ಎಂದರೆ ನಾನು ಸ್ವಾಧೀನದಲ್ಲಿ ಇರುವ ಆಸ್ತಿ ಕೇಳುತ್ತಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಒಟ್ಟು ಜಮೀನಿನ ಒಂದು ಪೈಕಿ ಆಸ್ತಿಯನ್ನು ನಾನು ಪರಿಹಾರ ಕೇಳಿದ ಕಾರಣ ನಾನು ಒಟ್ಟು ಶುಲ್ಕ ಪಾವತಿಸದ ಕಾರಣ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ನಂಜನಗೂಡು.